**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 500 |
| ಉತ್ತರಿಸಬೇಕಾದ ದಿನಾಂಕ | : | 10 -03-2020 |
| ಉತ್ತರಿಸುವ ಸಚಿವರು | : | ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಾರವಾರ ಜಿಲ್ಲೆಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ವಸತಿ ನೀಡಲು ಯಾವ ಯಾವ ಯೋಜನೆಗಳಿವೆ; | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕೊಳಗೇರಿ ನಿವಾಸಿಗಳಿಗೆ ವಸತಿ ನೀಡಲು ಹುಡ್ಕೋ ವಸತಿ ಯೋಜನೆ, ವಾಂಬೇ ವಸತಿ ಯೋಜನೆ, ಕೇಂದ್ರ ಪುರಸ್ಕೃತ ನರ್ಮ್-ಐ.ಹೆಚ್.ಎಸ್.ಡಿ.ಪಿ., ರಾಜೀವ್ ಆವಾಸ್ ಯೋಜನೆ (ರೇ) ಮತ್ತು ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ಗಳಿವೆ. |
| (ಆ) | ಇದುವರೆಗೆ ಕಾರವಾರ ಜಿಲ್ಲೆಯಲ್ಲಿ ಮಂಡಳಿಯಿಂದ ಎಷ್ಟು ಜನರಿಗೆ ವಸತಿಗಳನ್ನು ಒದಗಿಸಲಾಗಿದೆ; (ತಾಲ್ಲೂಕುವಾರು / ಜಿಲ್ಲೆವಾರು ಸವಿಸ್ತಾರ ವರದಿ ನೀಡುವುದು) | ಕಾರವಾರ ಜಿಲ್ಲೆಯಲ್ಲಿ ಕೊಳಗೇರಿ ನಿವಾಸಿಗಳಿಗೆ ಇದುವರೆಗೆ ನಿರ್ಮಿಸಿರುವ ವಸತಿ ವಿವರ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ ನೋಡಿ) |

| ಕ್ರ.ಸ | ಯೋಜನೆ | ವರ್ಷ | ಮನೆಗಳ ಸಂಖ್ಯೆ |
|---|---|---|---|
| 1 | ಹುಡ್ಕೋ ವಸತಿ | 1991-2001 | 436 |
| 2 | ವಾಂಬೇ ವಸತಿ | 2005-06 | 413 |
| 3 | ಪ್ರಧಾನ ಮಂತ್ರಿ ಆವಾಸ್ ಯೋಜನೆ | 2017-18 | 709* |
| 4 | ಪ್ರಧಾನ ಮಂತ್ರಿ ಆವಾಸ್ ಯೋಜನೆ | 2018-19 | 4690** |
| | ಒಟ್ಟು | | 6248 |

*ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮನೆಗಳ ನಿರ್ಮಾಣ ಕಾಮಗಾರಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ.

**ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಂತ-7 & 8 ರಲ್ಲಿ 4690 ಮನೆಗಳು ಮಂಜೂರಾಗಿದ್ದು, ಆಡಳಿತಾತ್ಮಕ ಅನುಮೋದನೆಯ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

**ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.**

| | | |
|---|---|---|
| (ಇ) | ಕಾರವಾರ ಜಿಲ್ಲೆಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ವಸತಿಗಾಗಿ ಎಷ್ಟು ಬೇಡಿಕೆ ಇವೆ; ಈಗಾಗಲೇ ಎಷ್ಟು ಮನವಿಗಳು ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳಿಂದ ಬಂದಿದೆ; ಇವರಿಗೆಲ್ಲ ಎಷ್ಟು ದಿವಸಗಳಲ್ಲಿ ವಸತಿ ಒದಗಿಸಲಾಗುವುದು; | ಕಾರವಾರ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮಾರ್ಗಸೂಚಿಯಂತೆ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿವತಿಯಿಂದ ಬೇಡಿಕೆ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಬೇಡಿಕೆ ಸಮೀಕ್ಷೆ ಪ್ರಕಾರ ಕೊಳಗೇರಿಗಳಲ್ಲಿ ಒಟ್ಟು 4690 ಮನೆಗಳಿಗೆ ಬೇಡಿಕೆ ಇರುತ್ತದೆ. ಪ್ರಧಾನಮಂತ್ರಿ ಆವಾಸ್ ಯೋಜನೆ-ಸರ್ವರಿಗೂ ಸೂರು ಯೋಜನೆಯ ಮಾರ್ಗಸೂಚಿಯಂತೆ 2022 ರೊಳಗೆ ವಸತಿ ಕಲ್ಪಿಸುವ ಗುರಿ ಹೊಂದಲಾಗಿದೆ. |
| (ಈ) | ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಈಗಾಗಲೇ ನೀಡಿರುವ ಮನೆಗಳಿಗೆ ಮತ್ತೆ ರಿಪೇರಿ ಕಾರ್ಯಕ್ಕೆ ಅನುದಾನ ಮಂಜೂರು ಮಾಡಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಮನೆಗಳಿಗೆ ಮತ್ತೆ ಅವಕಾಶ ಕಲ್ಪಿಸಲಾಗಿದೆ; ವಸತಿಗಳನ್ನು ರಿಪೇರಿ ಮಾಡುವ ಹೊಣೆ ಯಾರದು; ಎಷ್ಟು ದಿವಸಗಳಲ್ಲಿ ರಿಪೇರಿ ಮಾಡಿಕೊಡಲಾಗುವುದು? (ತಾಲ್ಲೂಕುವಾರು / ಜಿಲ್ಲಾವಾರು ಸವಿಸ್ತಾರ ವರದಿ ನೀಡುವುದು) | ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಮನೆಗಳ ದುರಸ್ತಿಗಾಗಿ ಯಾವುದೇ ಅನುದಾನವನ್ನು ನೀಡುತ್ತಿಲ್ಲ. ಮನೆಗಳ ನಿರ್ವಹಣೆಯ ಹೊಣೆ ಫಲಾನುಭವಿಗಳದ್ದಾಗಿರುತ್ತದೆ. |

ಕಡತ ಸಂಖ್ಯೆ: ವಇ 39 ಎಸ್‌ಬಿಎಂ 2020

(ವಿ.ಸೋಮಣ್ಣ)
ವಸತಿ ಸಚಿವರು

**ANNEXURE-QNS-500**

**HUDCO and VAMBAY Yojana**

| District | Taluk | Hudco | Vambay |
|---|---|---|---|
| Karwar | Karwar | 85 | - |
| | Haliyal | 88 | 41 |
| | Dandeli | 263 | - |
| | Yallapura | - | 233 |
| | Sirasi | - | 97 |
| | Kumata | - | 42 |
| | **Total** | **436** | **413** |

**Pradhana Mantri Awas Yojana-HFA(Urban)**

| District | Taluk Name | No. of slums | No. of houses sanctioned | Project Cost |
|---|---|---|---|---|
| Karwar | Mundgod | 2 | 209 | 1176.67 |
| Karwar | Dandeli | 2 | 287 | 1615.81 |
| Karwar | Haliyal | 3 | 213 | 1199.19 |
| Karwar | Dandeli | 3 | 1176 | 8825.98 |
| Karwar | Haliyal | 4 | 661 | 4960.86 |
| Karwar | Kumta | 2 | 411 | 2992.81 |
| Karwar | Mundgod | 4 | 906 | 6597.28 |
| Karwar | Sirsi | 4 | 644 | 4689.46 |
| Karwar | Yallapura | 3 | 579 | 4216.15 |
| Karwar | Bhatkala | 2 | 313 | 2279.20 |
| | **Total** | **29** | **5399** | **38553.41** |